# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,

## ಮಹದೇವಪುರ ವಲಯ, ಬೆಂಗಳೂರು – 560 113.

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021-22

ದಿನಾಂಕ: 17.01.2022

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ-25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:-17.01.2022 ರಂದು ಅಪರಾಹ್ನ 12.00ಗಂಟೆಗೆ https://meet.google.com/ouu-qwro-wpk ರಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು. ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತವೆ.*

ಉಪಸ್ಥಿತರು:

| ಕ್ರಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | ಅಧಿಕಾರಿಗಳು | | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | |
| 3 | ಶ್ರೀ.ರಮೇಶ್ | ಕಿರಿಯ ಅಭಿಯಂತರರು, ವಾರ್ಡ್ ನಂ.25 | |
| 4 | ಶ್ರೀ. ಸಂಜಯ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು (ವಾ.ನಂ.25) | 9742919411 |
| 5 | ಶ್ರೀ.ಜೋಸೆಫ್ | ದಾಸಪ್ಪ ಲೇಔಟ್ | |
| 6 | ಶ್ರೀಮತಿ.ರಶ್ಮಿ | | |
| 7 | ಶ್ರೀಮತಿ.ಸೋನಿಯಾ | | |
| 8 | ಶ್ರೀ.ಥಾಮಸ್ | | |
| 9 | ಶ್ರೀಮತಿ.ಸರೋಜ | | |
| 10 | ಶ್ರೀ.ಕಲ್ಯಾಣ್ | | |
| 11 | ಶ್ರೀ.ಸುನೀಲ್ | | |

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

ಶ್ರೀಮತಿಸೋನಿಯಾ:- ರವರು ಮಾತನಾಡಿ ವಡ್ಡರಪಾಳ್ಯ 4ನೇ ಕ್ರಾಸ್ ಇಲ್ಲಿ ಅಭಿಯಂತರರು ಬಂದು ರಸ್ತೆ ಪರಿಶೀಲನೆ ಮಾಡಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಜೋಸೆಪ್:- ಅರ್ಕಾವತಿ ಪಕ್ಕ ಒಂದು ಮೋರಿ, ಶಿಲ್ಪ ಬೇಕರಿ ಹತ್ತಿರ ರೈಲ್ವೇ ಟ್ರಾಕ್ ರಸ್ತೆಯಲ್ಲಿ ಆರ್.ಸಿ.ಸಿ ಡ್ರೈನ್ ಬಗ್ಗೆ ಕ್ರಮವಹಿಸಲು ಕೋರಿದ್ದು, ಮತ್ತು ವಡ್ಡರಪಾಳ್ಯ ಎಸ್.ಎಂ.ಸಿ.ಎ – ಕಸದ ಸಮಸ್ಯೆ ಬಗ್ಗೆ ಸಭೆಯಲ್ಲಿ ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ, ಹಿರಿಯ ಆರೋಗ್ಯ ಅಧಿಕಾರಿಗಳು, ಹೊರಮಾವು ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀಮತಿ.ರಶ್ಮಿ ರೋಚಿ ಎನ್‌ಕ್ಲೇವ್:- ರವರು ಮಾತನಾಡಿ ರಸ್ತೆ ಸಮ ಮಾಡಲು ಮತ್ತು ಅತಿ ಮುಖ್ಯವಾಗಿ ಬೀದಿ ದೀಪಗಳ ದುರಸ್ಥಿ ಹಾಗೂ ಹೊಸ ಲೈಟ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ, ಹಾಗೂ ಸಂಬಂಧಪಟ್ಟ ಬೀದಿ ದೀಪಗಳ ನಿರ್ವಹಣೆ ಅಧಿಕಾರಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

Scanned with CamScanner

<u>ಶ್ರೀ.ಸುನೀಲ್ ಥಾಮಸ್:-</u> ರವರು ಮಾತನಾಡುತ್ತಾ, ಕೆ.ನಾರಾಯಣಪುರ, ಹೊರಮಾವು ಬ್ರಿಗೇಡ್ ಆಲ್ಪ್‌ಮೆಂಟ್ ಡ್ರೈನ್ ಸ್ವಚ್ಛತೆ ಮಾಡಿಸಲು ಕಾರ್ಮಿಕರನ್ನು ಕಳುಹಿಸಲು ಹಾಗೂ ಕಸ ಹಾಕಲು ವಾಹನವನ್ನು ಕಳುಹಿಸಬೇಕೆಂದು ಕೋರುತ್ತಾ, ರಸ್ತೆಯ ಗುಂಡಿಗಳನ್ನು ಸರಿಪಡಿಸಲು ಕೋರಿದ್ದು, ಮತ್ತು ಕೋವಿಡ್ ಲಸಿಕೆ ಹಾಕಿಸಬೇಕೆಂದು ಸೂಕ್ತ ಕ್ರಮ ವಹಿಸಲು ಕೋರಿಕೊಂಡಿರುತ್ತಾರೆ.

<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ, ಹಿರಿಯ ಆರೋಗ್ಯ ಅಧಿಕಾರಿಗಳು, ಹೊರಮಾವು ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀ.ಸಂಜಯ್‌ಕುಮಾರ್ ಹಿರಿಯ ಆರೋಗ್ಯ ನಿರೀಕ್ಷಕರು ವಾರ್ಡ್ ಸಂ.25:-</u> ರವರು ಮಾತನಾಡುತ್ತಾ, ಹೊರಮಾವು ಶಾಲೆ - ಕಾಲೇಜುಗಳಲ್ಲಿ ಸುಮಾರು 15 ವರ್ಷ ವಯಸ್ಸಿನ ಮಕ್ಕಳಿಗೆ ಪಿ.ಹೆಚ್.ಸಿ ಗಳಲ್ಲಿ ಲಸಿಕೆ ಹಾಕಿಸುವ ಬಗ್ಗೆ 60 ವರ್ಷದ ವೃದ್ಧರಿಗೆ ಬೂಸ್ಟರ್ ಡೋಸ್ ಹಾಗೂ ಇತರರಿಗೆ 2 ಡೋಸ್‌ಗಳ ನಂತರ 9 ತಿಂಗಳ ಕಾಲಾವಧಿ ಮುಗಿದವರಿಗೆ ಬೂಸ್ಟರ್ ಡೋಸ್ ಹಾಕಿಸುವ ಬಗ್ಗೆ ಚರ್ಚಿಸಿರುತ್ತಾರೆ.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ಸಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಿರಿಯ ಅಭಿಯಂತರರು
ಹೊರಮಾವು ವಾರ್ಡ್-25
ಬಿ.ಬಿ.ಎಂ.ಪಿ